# ಆಸೆಯೆಂಬುದು ಅರಸಿಂಗಲ್ಲದೆ..

ಆಯ್ದಕ್ಕಿ ಮಾರಯ್ಯ ಬಸವಣ್ಣನವರ ಸಮಕಾಲೀನ. ಅವನ ಕಾಯಕ ಅತ್ಯಂತ ವಿಶಿಷ್ಟವಾದುದು; ಪಕ್ಕಿಗಳಿಗೆ ಅನ್ವಯಮಾಡಿ ಹೇಳುವಂಥ ಕಾಯಕ. ಬೆಳೆ ಬೆಳೆಯುವ ಬಯಲಿನಲ್ಲಿ ರೈತರು ಕೊಯ್ಲುಮಾಡಿ ತಮ್ಮ ಧಾನ್ಯಗಳನ್ನು ತೆಗೆದುಕೊಂಡು ಹೋದ ಮೇಲೆ, ಹೊಲಗಳಲ್ಲಿ ಅಲ್ಲಲ್ಲಿ ಬಿದ್ದಿರುವ ಕಾಳುಗಳನ್ನು ಆಯ್ದು ಕಾಯಕ ಮಾಡುವ ವೃತ್ತಿ ಅವನದು. ಬೆಳಿಗ್ಗೆಯಿಂದ ಸೂರ್ಯ ಮುಳುಗುವರೆಗೂ ಆಯುವ ಕಾಯಕ ಮಾಡಿ ಆ ದಿನಕ್ಕಾಗುವಷ್ಟು ಧಾನ್ಯಗಳನ್ನು ತಂದು ತನ್ನ ಮಡದಿ ಲಕ್ಕಮ್ಮನಿಗೆ ನೀಡುತ್ತಿದ್ದ. ಅದರಿಂದ ಅವಳು ಆಹಾರ ತಯಾರಿಸುತ್ತಿದ್ದಳು. ಒಮ್ಮೆ ಅವನು ತುಸು ಹೆಚ್ಚು ಅಕ್ಕಿಯನ್ನು ಆಯ್ದು ಮನೆಗೆ ತಂದನು. ಅದು ಅವನ ಮಡದಿಗೆ ಇಷ್ಟವಾಗಲಿಲ್ಲ. ತನ್ನ ಗಂಡನಿಗೆ ಹೀಗೆ ಹೇಳಿದಳು:

ಆಸೆಯೆಂಬುದು ಅರಸಿಂಗಲ್ಲದೆ
ಶಿವಭಕ್ತರಿಗುಂಟೆ ಅಯ್ಯ! ...
ಈಸಕ್ಕಿಯಾಸೆ ನಿಮಗೇಕೆ? ಈಶ್ವರ ನೊಪ್ಪ
ಮಾರಯ್ಯ ಪ್ರಭು ಅಮರಲೇಶ್ವರಲಿಂಗಕ್ಕೆ ದೂರ ಮಾರಯ್ಯ.

ಪಶುಪಕ್ಷಿಗಳು ಅಂದಂದಿನ ಆಹಾರವನ್ನು ಅಂದಂದೇ ಹುಡುಕಿ ಭುಜಿಸುತ್ತವೆ. ಸಂಗ್ರಹಗುಣ ಅವಕ್ಕಿಲ್ಲ. ಸಂಗ್ರಹವೆಂಬುದು ಪ್ರಕೃತಿ ನ್ಯಾಯಕ್ಕೆ ವಿರುದ್ಧವಾದ ಗುಣ. ಸಂಗ್ರಹವೆಂಬುದು ಇತರರ ಆಹಾರವನ್ನು, ಸುಖವನ್ನು ಕಿತ್ತುಕೊಳ್ಳುವ ಪ್ರವೃತ್ತಿ. ಸಂಗ್ರಹವೆಂಬುದು ದುರಾಸೆಯನ್ನು, ಸ್ವಾರ್ಥವನ್ನು ಸೂಚಿಸುತ್ತದೆ. ಈ ಪ್ರವೃತ್ತಿ ಮುಂದೆ ಬೆಳೆದಂತೆಲ್ಲ ಮಾನವ ಜಗತ್ತಿನಲ್ಲಿ ಬಡವ-ಶ್ರೀಮಂತ ವರ್ಗ ವ್ಯವಸ್ಥೆ ಉಂಟಾಗಲು ಕಾರಣವಾಯಿತು. ಮುಂದೆ ಈ ಪ್ರವೃತ್ತಿಯೇ ಬಂಡವಾಳವಾಗಿ ಬಡವರನ್ನು ಶೋಷಿಸುವ ಅಸ್ತ್ರವಾಗಿ ಕೆಲಸ ಮಾಡಿತು. ಈ ಕ್ರೂರತೆಯನ್ನು ಹನ್ನೆರಡನೆ ಶತಮಾನದಲ್ಲಿ ಆಯ್ದಕ್ಕಿ ಮಾರಯ್ಯನ ಪತ್ನಿ ಲಕ್ಕಮ್ಮ ಗುರುತಿಸಿ, ಹೆಚ್ಚು ಅಕ್ಕಿ ತಂದ ಗಂಡನನ್ನು ತರಾಟೆಗೆ ತೆಗೆದುಕೊಳ್ಳುತ್ತಾಳೆ. ಇದು 'ಈಶ್ವರ ನೊಪ್ಪುವ' ಕೆಲಸವಲ್ಲ, ದೇವರಿಂದ ದೂರವಾಗುವ ಸಂಗತಿಯೆಂದು ಗಂಡನಿಗೆ ತಿಳಿಹೇಳುತ್ತಾಳೆ.

ವಚನಕಾರರು ಬದುಕಿನ ಬವಣೆಯನ್ನು ಆಳವಾಗಿ ಗ್ರಹಿಸಿದ್ದರು. ತರತಮ ಭಾವನೆಯಿಂದಾಗಿ, ಆರ್ಥಿಕ ಧಾರ್ಮಿಕ ಕಾರಣದಿಂದಾಗಿ ಸಾಮಾನ್ಯರು ನುಲುಗಿ ಹೋಗಿರುವ ಸತ್ಯವನ್ನು ಅರಿತಿದ್ದರು. ಅದನ್ನು ಗುರುತಿಸಿ ತಮ್ಮ ವಚನಗಳಲ್ಲಿ ವ್ಯಕ್ತಪಡಿಸಿದರು. ಬಡವ-ಬಲ್ಲಿದರಲ್ಲಿನ ಮಾನವ ಪ್ರೀತಿ- ಮಾನವತೆಯ ಸ್ಪಂದನವನ್ನು ಅರ್ಥಮಾಡಿಕೊಂಡಿದ್ದರು. ಬಡವ ಬಡವನಿಗಾಗುತ್ತಾನೆ; ಬಡವ ನೋವಿಗೆ ಸ್ಪಂದಿಸಿ ನೆರವಿನ ತುಡಿತವನ್ನು ಮಿಡಿಯುತ್ತಾನೆ. ತನ್ನಲ್ಲಿರುವಷ್ಟರಲ್ಲೇ ಹಂಚಿ ತಿನ್ನುವ ಮನೋಧರ್ಮ ಸಾಮಾನ್ಯನಿಗಿರುತ್ತದೆ. ಈ ಸಾಮಾನ್ಯನಿಗಿರುವ ಗುಣವನ್ನೇ ಕುವೆಂಪು ಅವರು ಗುರುತಿಸಿ 'ಶ್ರೀ ಸಾಮಾನ್ಯತೆ' ಎಂದು ಕರೆದು ಅದು 'ಭಗವನ್ಮಾನ್ಯ' ಎಂದರು. ಈ ಅಂಶವನ್ನೇ ಕಾರ್ಲ್ ಮಾರ್ಕ್ಸನು ತನ್ನ ಸಿದ್ಧಾಂತದ ಆತ್ಮವನ್ನಾಗಿಸಿಕೊಂಡಿದ್ದಾನೆ; ಗಾಂಧೀಜಿಯವರು ಹಂಚಿಕೆಯ ಮಂತ್ರವನ್ನಾಡುತ್ತಾರೆ; ವಿನೋಬಾ ಅವರು 'ಭೂದಾನ'ದ ಚಳವಳಿಯನ್ನಾಗಿಸುತ್ತಾರೆ.

ಆಯ್ದಕ್ಕಿ ಲಕ್ಕಮ್ಮ ಇಲ್ಲಿ ಮತ್ತೊಂದು ಮುಖ್ಯ ಮನಸ್ಥಿತಿಯೊಂದನ್ನು ಗುರುತಿಸಿದ್ದಾಳೆ. 'ಆಸೆಯೆಂಬುದು ಅರಸಿಂಗಲ್ಲದೆ..' ಎಂಬ ಮಾತಿನಲ್ಲಿ ಶ್ರೀಮಂತರ ಮನೋಧರ್ಮವನ್ನು ಅನಾವರಣ ಮಾಡಿದ್ದಾಳೆ. ಶಿವಭಕ್ತರಿಗೆ ಆಸೆ ಇರದು ಎಂದರೆ ಕೂಡಿಡುವ ಆಸೆಯಿರದು ಎಂದರ್ಥ. ಶಿವಭಕ್ತ ವರ್ಗ ಮತ್ತು ಜಾತಿ ವ್ಯವಸ್ಥೆಯನ್ನು ಹೊಡೆಯುವ ಗುರಿಯನ್ನಿಟ್ಟುಕೊಂಡಿರುತ್ತಾನೆ. ಅವನು ಸಮತಾಭಾವದಲ್ಲಿ ನಂಬಿಕೆಯಿಟ್ಟವನು. 'ಸರ್ವರಿಗೆ ಸಮಪಾಲು; ಸರ್ವರಿಗೆ ಸಮಬಾಳು' ಎಂಬ ಧ್ಯೇಯವುಳ್ಳವನು. ಆದರೆ 'ಅರಸ'ನಿಗೆ ಈ ಮನೋಧರ್ಮ ವಿರುವುದಿಲ್ಲ. ಅರಸರಿಗೆ ಕಾರ್ಯಪ್ರಜ್ಞೆಯೇ ಇರುವುದಿಲ್ಲ. ತಮ್ಮ ದೇಹ ದಂಡನೆಯ ಮೂಲಕ ದೇಹ ಪೋಷಣೆ ಮಾಡಬೇಕೆಂಬ ಅರಿವೂ ಇರುವುದಿಲ್ಲ. ಅವರು ಇತರರ ಕಾಯಕದ ಮೇಲೆ, ಶ್ರಮದ ಮೇಲೆ ಅವಲಂಬಿತರಾಗಿರುತ್ತಾರೆ. ಸಾಮಾನ್ಯರಿರುವುದೇ ತಮ್ಮ ಸೇವೆಗೆಂದು ತಿಳಿದವರು. ಸಾಮಾನ್ಯರು ಅರಸರ ಸೇವಕರು, ಗುಲಾಮರು, ಹೆಚ್ಚೆಂದರೆ ಪರಿವಾರದವರು. ಅರಸುಗಳಿಗೆ ಆಸೆಯೆಂಬುದು ಅಸ್ತಿತ್ವದ ಗುಣವಾಗಿರುತ್ತದೆ. ಭೋಗದಾಸೆ, ಇತರರ ಆಸ್ತಿಯನ್ನು ಮತ್ತು ಇತರ ಸಾಮ್ರಾಜ್ಯವನ್ನು ಕಬಳಿಸುವ ಆಸೆ ಇರುತ್ತದೆ. ಅದಕ್ಕಾಗಿ ಸಾಮಾನ್ಯರ ಆಸ್ತಿಪಾಸ್ತಿಗಳನ್ನು, ಪ್ರಾಣವನ್ನು ನಾಶಮಾಡುತ್ತಾರೆ. ಮುತ್ತಿಗೆ ಹಾಕಿದ ಸಮಯದಲ್ಲಿ ಅತ್ಯಂತ ಕ್ರೂರವಾಗಿ ನಡೆದುಕೊಳ್ಳುತ್ತಾರೆ. ಚರಿತ್ರೆಯಲ್ಲಿ ಈ ಅರಸುಗಳ ಕ್ರೌರ್ಯ ಅಡೆತಡೆಯಿಲ್ಲದೆ ನಡೆಸಿರುವುದನ್ನು ನೋಡಬಹುದು.

ಇಂಥ ಸ್ವಾರ್ಥಿಗಳೂ ಆಸೆಬುರುಕರೂ ಆದ ಅರಸುಗಳು ಇಂದು ಇಲ್ಲ. ಇರುವಂಥ ಕೆಲವರಾದರೂ ರೆಕ್ಕೆಪುಕ್ಕ ಕಳೆದುಕೊಂಡು ರಾಜಧನಕ್ಕಾಗಿ ಕೈ ಚಾಚಿ ನಿಂತಿದ್ದಾರೆ. ಆದರೆ ಅವರ ಸ್ಥಾನದಲ್ಲಿ ನವ ಶ್ರೀಮಂತರು ಉದ್ಭವಗೊಂಡಿದ್ದಾರೆ. ಇಂದು ಭಾರತ ಇಪ್ಪತ್ತು ಶ್ರೀಮಂತರ ಕೈಯಲ್ಲಿದ್ದಾರೆ, ಜಗತ್ತು ಅಂಥ ನೂರಿಪ್ಪತ್ತು, ಶ್ರೀಮಂತರ ಹಿಡಿತದಲ್ಲಿದೆ. ಸಾಮ್ರಾಜ್ಯಗಳು ಅಳಿದು ಶ್ರೀಮಂತರ ಅರ್ಥಾತ್ ವರ್ತಕರ ನವ ಸಾಮ್ರಾಜ್ಯ ಶಾಹಿಗಳು ಜನಿಸಿದ್ದಾರೆ. ಇವರು ಸರ್ಕಾರಗಳನ್ನು, ಸಮುದಾಯಗಳನ್ನು ಸ್ವಾರ್ಥಕ್ಕಾಗಿ ತಮ್ಮ ನಿಯಂತ್ರಣಕ್ಕೆ ತೆಗೆದುಕೊಂಡಿದ್ದಾರೆ. ಇಂದು ಜನಪ್ರತಿನಿಧಿಗಳೆನ್ನಿಸಿಕೊಂಡ ನಮ್ಮ (ಜಗತ್ತಿನ) ರಾಜಕಾರಣಿಗಳು ಜನವಿರೋಧಿಗಳಾಗಿ ಈ 'ನವರಾಜ'ರ ಕೈ ಗೊಂಬೆಗಳಾಗಿದ್ದಾರೆ. ಮತ್ತೆ ಲಕ್ಕಮ್ಮ ಪ್ರಸ್ತುತವಾಗಿ 'ಅಶೆಯೆಂಬುದು ಅರಸಿಂಗಲ್ಲದೆ' ಎಂಬ ಮಾತು ಅನುರಣಿತವಾಗುತ್ತದೆ.

■ ಶಿಕಾಕು

# ಮಾತೇ ಮುತ್ತು

★ ಮನಸ್ಸೇ ಬಂಧನಕ್ಕೆ ಕಾರಣ, ಮನಸ್ಸೇ ಮುಕ್ತಿಗೆ ಕಾರಣ. ಮನಸ್ಸಿಗೆ ಯಾವ ಬಣ್ಣ ಕೊಟ್ಟರೆ ಅದು ಆ ಬಣ್ಣ ಧರಿಸುತ್ತದೆ.
-ರಾಮಕೃಷ್ಣ ಪರಮಹಂಸ

★ ಮನಸಿನೊಳಗಡೆ ಎಂದೂ ಇಣುಕಲಾರಿರಿ ನೀವು, ಹುಡುಕಿ ತೆಗೆಯಲಾರಿರಿ ಏನನೂ, ಇಣುಕಲಾದರೂ ಹಾಗೆ ಮಾಡಲಾಗದು ನೀವು.
-ವೈದೇಹಿ

★ ಒಳ್ಳೆಯ ಮನುಷ್ಯ, ನೀತಿವಂತ ಎಂದರೆ ಸಹ ಮಾನವರ ಸುಖ- ದುಃಖಗಳಲ್ಲಿ ಭಾಗಿಯಾಗುವವನು.
-ಎ.ಎನ್.ಮೂರ್ತಿರಾವ್

★ ಸಣ್ಣವರು ದೊಡ್ಡವರೆನಿಸಿಕೊಂಡು, ದೊಡ್ಡವರು ಸಣ್ಣವರೆನಿಸಿಕೊಳ್ಳುವ ಸ್ಥಳವೇ ಮನೆ.
-ನಾ.ಕಸ್ತೂರಿ

★ ಹೊಸ ಮನೆಯಲ್ಲಿ ಮೊದಲ ವರ್ಷ ನಿನ್ನ ಶತ್ರು ಇರಲಿ; ಎರಡನೆ ವರ್ಷ ನಿನ್ನ ಮಿತ್ರ ಇರಲಿ; ಮೂರನೇ ವರ್ಷ ನೀನೇ ಇರು.
-ಡಚ್ ಗಾದೆ

★ ಮಹಾಪುರುಷರ ವಿಷಯದಲ್ಲಿ ಅವರ ಮನೆಯವರಿಗೇ ಗೌರವ ಇರುವುದಿಲ್ಲ.
-ಬರ್ನಾರ್ಡ್ ಷಾ

★ ತಿಳಿದಿರುವವನು ಮಾತನಾಡುವುದಿಲ್ಲ, ಮಾತನಾಡುವವನಿಗೆ ತಿಳಿದಿರುವುದಿಲ್ಲ.
-ಲಾವೋತ್ಸು

★ ಉತ್ತಮನಾದವನು ಕಡಿಮೆ ಮಾತನಾಡುತ್ತಾನೆ; ಮಾತಿಗಿಂತ ಹೆಚ್ಚಾಗಿ ಕೆಲಸ ಮಾಡುತ್ತಾನೆ.
-ಕನ್‌ಫ್ಯೂಷಿಯಸ್

★ ಕೋಲು, ಕಲ್ಲು ನಮ್ಮ ಮೂಳೆ ಮುರಿಯುತ್ತವಾದರೆ, ಮಾತು ನಮ್ಮ ಹೃದಯ ಮುರಿಯುತ್ತದೆ.
-ರಾಬರ್ಟ್ ಫಲ್ಗುಂ

★ ದಡ್ಡ ಮಾತನಾಡುತ್ತಾನೆ; ಜಾಣ ಕೇಳುತ್ತಾನೆ.
-ಆಫ್ರಿಕಾ ಗಾದೆ

★ ನಮ್ಮ ಭಾಷೆಯನ್ನು ನಾವು ಎತ್ತದೆ ಹೋದರೆ ಎತ್ತುವವರು ಯಾರು? ಎತ್ತುವುದಕ್ಕೆ ನಿಂತರೆ ತಡೆಯುವವರು ಯಾರು?
-ಬಿ.ಎಂ.ಶ್ರೀ.

★ ಊಟ ಮಾಡಿದ್ದು ಹೊಟ್ಟೆಗೆ ಹೋಗಬೇಕಾದರೆ ಬಾಯಿಯೇ ಸರಿಯಾದ ಮಾರ್ಗ. ತಾಯ್ನುಡಿ ಜನರ ಬಾಯಿ.
-ಎ.ಆರ್.ಕೃಷ್ಣಶಾಸ್ತ್ರಿ